# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಡುವಳಿ ಮಾಡಬಹುದಾದ ಮೀನಿನ ಕನಿಷ್ಟ ಕಾನೂನಾತ್ಮಕ ಗಾತ್ರ (Minimum legal size) ನಿಗದಿಗೊಳಿಸುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಫ್/60/ಎಂಇಎಫ್/2018 ದಿನಾಂಕ: 28-02-2019.

******

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಸಣ್ಣ / ಮರಿ ಮೀನುಗಳನ್ನು ಹಿಡಿಯುವುದನ್ನು ನಿಯಂತ್ರಿಸಲು ಮತ್ತು ಮೀನಿನ ಬೆಳವಣಿಗೆಗೆ ಮುಂಚಿನ ಅತಿಯಾದ ಮೀನುಗಾರಿಕೆಯನ್ನು ತಪ್ಪಿಸಲು ಹಿಡುವಳಿ ಮಾಡಬಹುದಾದ ಮೀನಿನ ಕನಿಷ್ಟ ಕಾನೂನಾತ್ಮಕ ಗಾತ್ರ (Minimum legal size) ನಿಗದಿಪಡಿಸುವುದು ಸೂಕ್ತವೆಂದು ಹಾಗೂ ಕಡಲ ಮೀನುಗಾರಿಕೆ ನಿರ್ವಹಣೆಯಲ್ಲಿ ಒಂದು ಪ್ರಮುಖ ಅಂಶವೆಂದು ತಿಳಿಸಿರುತ್ತಾರೆ. ಪ್ರಸ್ತುತ ಪ್ರೌಢಾವಸ್ಥೆಗೆ ತಲುಪದ ಸಣ್ಣ ಮೀನುಗಳನ್ನು ಫಿಶ್ ಮೀಲ್ ಪ್ಲಾಂಟ್ / ಸುರುಮಿ ಘಟಕಗಳಿಗೆ ಕಚ್ಚಾ ವಸ್ತುವಾಗಿ ಉಪಯೋಗಿಸಲಾಗುತ್ತಿದೆ. ಸಣ್ಣ ಮೀನುಗಳನ್ನು ಹಿಡಿಯುವುದರಿಂದ, ಮುಂದೆ ಮೀನಿನ ಸಂಪತ್ತು ಹೆಚ್ಚಳಕ್ಕೆ ತೊಂದರೆಯಾಗಿ ಮೀನಿನ ಉತ್ಪಾದನೆಯು ಸಹ ಕಡಿಮೆಯಾಗುವುದು.

29 JUN 2019

ಸೆಂಟ್ರಲ್ ಮರೈನ್ ಫಿಶರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್, ಕೊಚ್ಚಿನ್ ಇವರು ಶಿಫಾರಸ್ಸು ಮಾಡಿರುವಂತೆ ಹಾಗೂ ಕರ್ನಾಟಕ ಕರಾವಳಿಯಲ್ಲಿ ಪ್ರಮುಖವಾಗಿ ದೊರೆಯುವ 19 ಜಾತಿಯ ಮೀನಿಗೆ ಕಡಲ ಮೀನುಗಾರಿಕೆ ನಿರ್ವಹಣೆ ಮತ್ತು ನಿಯಂತ್ರಣದ ದೃಷ್ಟಿಯಿಂದ ಕರ್ನಾಟಕ ಕಡಲ ಮೀನುಗಾರಿಕೆ ಅಧಿನಿಯಮ 1986ರ ಸೆಕ್ಷನ್ 3 ಸಬ್ ಸೆಕ್ಷನ್ 2(ಸಿ)ಯಂತೆ ಹಿಡುವಳಿ ಮಾಡಬಹುದಾದ ಮೀನಿನ ಕನಿಷ್ಟ ಕಾನೂನಾತ್ಮಕ ಗಾತ್ರ ನಿಗದಿಪಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

-2-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ ಪಸಂಮೀ 157 ಮೀಇಯೋ 2018, ಬೆಂಗಳೂರು ದಿನಾಂಕ: 26-06-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಮರಿ ಮೀನುಗಳ ಹಿಡುವಳಿಯನ್ನು ತಡೆಗಟ್ಟಲು ಕರ್ನಾಟಕ ಕಡಲ ಮೀನುಗಾರಿಕೆ ಅಧಿನಿಯಮ 1986ರ ಸೆಕ್ಷನ್ (3) ಸಬ್ ಸೆಕ್ಷನ್ 2(ಸಿ)ಯಲ್ಲಿ ನೀಡಿರುವ ಅಧಿಕಾರದನ್ವಯ **ಅನುಬಂಧ**ದಲ್ಲಿ ನಮೂದಿಸಿರುವ 19 ಜಾತಿಯ ಮೀನುಗಳಿಗೆ ಕನಿಷ್ಠ ಕಾನೂನಾತ್ಮಕ ಗಾತ್ರ ನಿಗದಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು / ಕಾರವಾರ / ಉಡುಪಿ.
5) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

| Sl. No. | Species | ಸಾಮಾನ್ಯ ಹೆಸರು | MLS (cm) |
|---|---|---|---|
| 1 | *Sardinella longiceps* | ಬೂತಾಯಿ | *10.0 TL* |
| 2 | *Rastrelliger kanagurta* | ಬಂಗುಡೆ | *14.0 TL* |
| 3 | *Trichiurus lepturus* | ಪಾಂಬೊಲ್ | *46.0 TL* |
| 4 | *Scomberomorus commerson* | ಅಂಜಲ್ | *50.0 FL* |
| 5 | *Stolephorus* | ಕೊಲ್ಲತರು | *7.0 TL* |
| 6 | *Parastomateus niger* | ಕಪ್ಪು ಮಾಂಜಿ | *17.0 TL* |
| 7 | *Euthynnus affinis* | ಕೇದಾರ್ | *31.0 FL* |
| 8 | *Sillago sihama* | ಕಾಣೆ | *11.3 TL* |
| 9 | *Escualosa thoracata* | ಬೊಳೆಂಜಿರ್ | *8.9 TL* |
| 10 | *Nemipterus japonicus* | ಮದ್ಮಲ್ | *12.0 TL* |
| 11 | *Priacanthus hamrur* | ಡಿಸ್ಕೋ | *17.0 TL* |
| 12 | *Lactarius lactarius* | ಅಡೆ ಮೀನು | *10.0 TL* |
| 13 | *Cynoglossus macrostomus* | ನಂಗು | *9.0 TL* |
| 14 | *Pampus argenteus* | ಬಿಳಿ ಮಾಂಜಿ | *13.0 TL* |
| 15 | *Epinephelus diacanthus* | ಮುರು ಮೀನು | *18.0 TL* |
| 16 | *Johnius spp* | ಕಲ್ಲೂರು | *15.0 TL* |
| 17 | *Otolithes ,spp* | ಕೊಡ್ಡಾಯಿ | *17.0 TL* |
| 18 | *Uroteuthis photololigo duvauceli* | ಕೋಲು ಬಂಡಾಸ್ | *8.0 DML* |
| 19 | *Sepia pharaonis* | ಕಪ್ಪೆ ಬಂಡಾಸ್ | *11.0 DML* |

- TL: Total length ; FL: Fork Length; DML: Dorsal Mantle Length
- Consider the catch as violation if more than 50% of the catch sample is composed of fishes at or below the prescribed MLS

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)